VK
ವಿಜಯ ಕರ್ನಾಟಕ

**Saturday 6th April 2019, Page No.01 & 08**

## UPSC: RVCE Student Rahul Sharanappa Topper in Karnataka State.

# ಯುಪಿಎಸ್‌ಸಿ: ರಾಜ್ಯದಿಂದ 24 ಸಾಧಕರ ಆಯ್ಕೆ

**ಹೊಸದಿಲ್ಲಿ:** ಕೇಂದ್ರ ಲೋಕಸೇವಾ ಆಯೋಗದ 2018ರ ಸಾಲಿನ ನಾಗರಿಕ ಸೇವಾ ಪರೀಕ್ಷೆಗಳ ಫಲಿತಾಂಶ ಪ್ರಕಟವಾಗಿದ್ದು 759 ಮಂದಿಯ ಹೆಸರನ್ನು ನಾಗರಿಕ ಸೇವೆಗೆ ಶಿಫಾರಸು ಮಾಡಲಾಗಿದೆ. ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ನಡೆದ ಪ್ರಿಲಿಮ್ಸ್ ಪರೀಕ್ಷೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ವೈಯಕ್ತಿಕ ಸಂದರ್ಶನದ ಬಳಿಕ ಈ ಅಂತಿಮ ಪಟ್ಟಿ ಪ್ರಕಟವಾಗಿದೆ. ಜತೆಗೆ ಮೀಸಲು ಪಟ್ಟಿಯಲ್ಲಿರುವ 109 ಹೆಸರನ್ನೂ ಪ್ರಕಟಿಸಲಾಗಿದೆ.

ಆಯ್ಕೆಯಾದ 759 ಅಭ್ಯರ್ಥಿಗಳಲ್ಲಿ 577 ಪುರುಷರು ಮತ್ತು 182 ಮಹಿಳೆಯರಿದ್ದಾರೆ. ಆಯ್ಕೆಯಾದವರನ್ನು ಐಎಎಸ್, ಐಪಿಎಸ್, ಐಎಫ್‌ಎಸ್ ಮತ್ತು ಗ್ರೂಪ್ ಎ ಮತ್ತು ಬಿ ವಿಭಾಗದ ಕೇಂದ್ರೀಯ ಸೇವೆಗೆ ನೇಮಕ ಮಾಡಲಾಗುತ್ತದೆ.

ವಿವರ»08



**ಧಾರವಾಡದ ರಾಹುಲ್ ಶರಣಪ್ಪ ರಾಜ್ಯಕ್ಕೆ ಟಾಪರ್**

**ಮುಂಬಯಿ ಐಐಟಿ ವಿದ್ಯಾರ್ಥಿ ಕಾನಿಷ್ಕ್ ದೇಶಕ್ಕೆ ಟಾಪರ್**

**ಯಾರಿಗೆ ಎಷ್ಟು?**

| | |
|---|---|
| ಜನರಲ್ ಮೆರಿಟ್ | 361 |
| ಒಬಿಸಿ | 209 |
| ಪರಿಶಿಷ್ಟ ಜಾತಿ | 128 |
| ಪರಿಶಿಷ್ಟ ವರ್ಗ | 61 |
| ಒಟ್ಟು | 759 |

**ಯುಪಿಎಸ್‌ಸಿ: ಕಾನಿಷ್ಕ್ ಕಟಾರಿಯಾ ದೇಶಕ್ಕೆ ಫಸ್ಟ್ | ರಾಜ್ಯದ 24 ಮಂದಿಗೆ ರ‍್ಯಾಂಕ್**

# ಧಾರವಾಡದ ರಾಹುಲ್ ಸಂಕನೂರ ರಾಜ್ಯದ ಟಾಪರ್

**■ ವಿಕ ಸುದ್ದಿಲೋಕ** ಬೆಂಗಳೂರು

ಕೇಂದ್ರ ಲೋಕಸೇವಾ ಆಯೋಗವು 2018ರ ನಾಗರಿಕ ಸೇವಾ ಪರೀಕ್ಷೆಯ ಫಲಿತಾಂಶವನ್ನು ಶುಕ್ರವಾರ ಪ್ರಕಟಿಸಿದ್ದು, ಧಾರವಾಡದ ರಾಹುಲ್ ಶರಣಪ್ಪ ಸಂಕನೂರ ರಾಜ್ಯಕ್ಕೆ ಟಾಪರ್ ಆಗಿ ಹೊರಹೊಮ್ಮಿದ್ದಾರೆ. ರಾಷ್ಟ್ರಮಟ್ಟದಲ್ಲಿ ಇವರು 17ನೇ ರ‍್ಯಾಂಕ್ ಗಳಿಸಿದ್ದಾರೆ. ರಾಜ್ಯದ 24 ಅಭ್ಯರ್ಥಿಗಳು ರ‍್ಯಾಂಕ್ ಪಡೆದಿದ್ದಾರೆ.

ರಾಷ್ಟ್ರಮಟ್ಟದಲ್ಲಿ 45ನೇ ರ‍್ಯಾಂಕ್ ಪಡೆದಿರುವ ಬೆಂಗಳೂರಿನ ಎನ್. ಲಕ್ಷ್ಮಿ ರಾಜ್ಯಕ್ಕೆ ದ್ವಿತೀಯ ಟಾಪರ್ ಆಗಿದ್ದಾರೆ. ರ‍್ಯಾಂಕ್ ಪಡೆದ ಕರ್ನಾಟಕದ ಇನ್ನಿತರೆ ಅಭ್ಯರ್ಥಿಗಳೆಂದರೆ, ಆಕಾಶ್ ಎಸ್. (78), ಕೃತಿಕಾ (100), ಕೌಶಿಕ್ ಎಚ್.ಆರ್. (240), ವಿವೇಕ್ ಎಚ್.ಬಿ., (257), ನಿವೇದಿತಾ (303), ಗಿರೀಶ್ ಧರ್ಮರಾಜ್ ಕಲಗೊಂಡ (307), ಮಿರ್ಜಾ ಖಾದರ್ ಬೇಗ್ (336), ಯು.ಪಿ. ತೇಜಸ್ (338), ಹರ್ಷವರ್ಧನ ಬಿ.ಜೆ. (352), ಫಕೀರೇಶ್ ಕಲ್ಲಪ್ಪ ಬಾದಾಮಿ (372), ಡಾ. ನಾಗಾರ್ಜುನಗೌಡ (418), ಬಿ.ವಿ. ಅಶ್ವಿಜಾ (423), ಮಂಜುನಾಥ್ ಆರ್. (495), ಬೃಂದಾ ಎಸ್. (496), ಹೇಮಂತ್ (612), ಶೃತಿ ಎಂ.ಕೆ. (637), ವೆಂಕಟರಾಂ (694), ಸಂತೋಷ್ ಎಚ್. (753), ಅಶೋಕ್‌ಕುಮಾರ್ ಎಸ್. (711), ರಾಘವೇಂದ್ರ ಎನ್. (739), ಶಶಿಕಿರಣ್ (754). ಡಾ.ರಾಜ್‌ಕುಮಾರ್ ಐಎಎಸ್ ಅಕಾಡೆಮಿಯಲ್ಲಿ ತರಬೇತಿ ಪಡೆದವರು 17 ಮಂದಿ ರ‍್ಯಾಂಕ್ ಪಡೆದಿದ್ದಾರೆ ಎಂದು ಅಕಾಡೆಮಿ ತಿಳಿಸಿದೆ.



ಯುಪಿಎಸ್‌ಸಿ ಪರೀಕ್ಷೆಯಲ್ಲಿ ಮೊದಲ ರ‍್ಯಾಂಕ್ ಪಡೆದ ಕಾನಿಷ್ಕ್ ತಮ್ಮ ಪೋಷಕರೊಂದಿಗೆ ಸಂತಸ ಹಂಚಿಕೊಂಡಿದ್ದು ಹೀಗೆ...

## ನಿರೀಕ್ಷೆಯೇ ಇಲ್ಲದೆ ಬಂತು 17ನೇ ರ‍್ಯಾಂಕ್!

**■ ವಿಕ ಸುದ್ದಿಲೋಕ** ಹುಬ್ಬಳ್ಳಿ

ಕನಸು ಮನಸ್ಸಿನಲ್ಲೂ ಟಾಪ್ 20ರೊಳಗಿನ ರ‍್ಯಾಂಕ್ ನಿರೀಕ್ಷೆ ಮಾಡಿರಲಿಲ್ಲ, ಆದರೆ, ಖಂಡಿತ ರ‍್ಯಾಂಕ್ ಗಳಿಸುವ ವಿಶ್ವಾಸವಂತೂ ಇದ್ದೇ ಇತ್ತು. ದೇವರ ದಯೆ ಶ್ರಮದ ಪ್ರತಿಫಲವಾಗಿ ಉತ್ತಮ ರ‍್ಯಾಂಕ್ ಬಂದಿದೆ...

ಹೀಗೆಂದು 'ವಿಜಯ ಕರ್ನಾಟಕ'ದ ಜತೆ ಸಂತಸದ ಕ್ಷಣಗಳನ್ನು ಹಂಚಿಕೊಂಡರು ಯುಪಿಎಸ್‌ಸಿ ಪರೀಕ್ಷೆಯಲ್ಲಿ ದೇಶಕ್ಕೆ 17ನೇ ಹಾಗೂ ರಾಜ್ಯಕ್ಕೆ ಮೊದಲನೇ ರ‍್ಯಾಂಕ್ ಪಡೆದ ರಾಹುಲ್ ಶರಣಪ್ಪ ಸಂಕನೂರ.

''ನನ್ನನ್ನು ಓದಿಸಲು ಅಪ್ಪ, ಅಮ್ಮ ಕಷ್ಟಪಟ್ಟಿದ್ದರು. ಅವರಿಗೆ ದೇವರು ತಕ್ಕ ಪ್ರತಿಫಲ ಕೊಟ್ಟಿದ್ದಾನೆ ಎಂದು ಭಾವಿಸಿದ್ದೇನೆ. ಐಎಎಸ್ ಪರೀಕ್ಷೆಗೆ ಎಂದೂ ಊಟ, ನಿದ್ದೆ ಬಿಟ್ಟು ಓದಿರಲಿಲ್ಲ. ಆರಾಮವಾಗಿ ಶಿಸ್ತುಬದ್ಧವಾಗಿ ಅಧ್ಯಯನ ಮಾಡಿದ್ದೆ. ಅದಕ್ಕಾಗಿ ದಿನಚರಿ ಹಾಕಿಕೊಂಡಿದ್ದೆ. ನಾಲ್ಕಾರು ಗೆಳೆಯರೊಂದಿಗೆ ಹರಟೆ, ಓಡಾಟ ಮಾಡುತ್ತಿದ್ದೆ. ರಾತ್ರಿ 11ಕ್ಕೆ ಮಲಗಿ, ಬೆಳಗ್ಗೆ 6ಕ್ಕೆ ಎದ್ದು ಒಂದಷ್ಟು ಕಾಲ ವ್ಯಾಯಾಮ ಮಾಡುತ್ತಿದ್ದೆ, ಬಳಿಕ ಓದಿನಲ್ಲಿ ತೊಡಗಿಸಿಕೊಳ್ಳುತ್ತಿದ್ದೆ'' ಎಂದು ವಿವರಿಸಿದರು.

### ನನ್ನ ಶ್ರಮಕ್ಕೆ ದೇವರು ಕೊಟ್ಟ ಫಲ: ರಾಹುಲ್ ವ್ಯಾಖ್ಯಾನ

''ಅಂಥ್ರಾಪಲಾಜಿ ವಿಷಯದ ಮೇಲೆ ಆಂಗ್ಲ ಮಾಧ್ಯಮದಲ್ಲಿ ಪರೀಕ್ಷೆ ಬರೆದಿದ್ದೆ. ಇದರಲ್ಲಿ ಸಮಾಜಶಾಸ್ತ್ರ ಒಳಗೊಂಡು ಇತರ ವಿಷಯಗಳ ಬಗ್ಗೆ ಮಾಹಿತಿ ದೊರೆಯುತ್ತದೆ. ಇದು ಪರೀಕ್ಷೆ ಹಾಗೂ ಸೇವೆಗೆ ಸಹಾಯಕವಾಗುತ್ತದೆ ಎಂದು ಹಿರಿಯರು ಮಾರ್ಗದರ್ಶನ ಮಾಡಿದ್ದರು,'' ಎಂದು ತಮ್ಮ ಅನುಭವ ಹಂಚಿಕೊಂಡರು.

**ರಾಹುಲ್ ಹಿನ್ನೆಲೆ ಏನು?**

ಹುಬ್ಬಳ್ಳಿ ವಿದ್ಯಾನಗರದ ನಿವಾಸಿಯಾಗಿರುವ ರಾಹುಲ ಸಂಕನೂರ, ಬೆಳಗಾವಿ ಜಿಲ್ಲೆಯ ಖಾನಾಪುರದಲ್ಲಿ 1ರಿಂದ 7ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದ್ದಾರೆ. ಮೈಸೂರಿನ ರಾಮಕೃಷ್ಣ ಆಶ್ರಮದ ಪಾಠಶಾಲೆಯಲ್ಲಿ 8ನೇ ತರಗತಿಯಿಂದ ಪಿಯುಸಿವರೆಗೆ ಅಭ್ಯಾಸ ಮಾಡಿದ್ದರು. ಪಿಯುಸಿ ವಿಜ್ಞಾನದಲ್ಲಿ ಪ್ರತಿಶತ 98 ಅಂಕ ಗಳಿಸಿದ್ದ ರಾಹುಲ್, ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಹಾಗೂ ಜೀವಶಾಸ್ತ್ರದಲ್ಲಿ ನೂರಕ್ಕೆ ನೂರು ಅಂಕ ಪಡೆದಿದ್ದರು. ಸಿಇಟಿ ವೈದ್ಯಕೀಯದಲ್ಲಿ 26 ಹಾಗೂ ಎಂಜಿನಿಯರಿಂಗ್‌ದಲ್ಲಿ 28ನೇ ರ‍್ಯಾಂಕ್ ಗಳಿಸಿ ಬೆಂಗಳೂರಿನ ಆರ್.ವಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಎಲೆಕ್ಟ್ರಿಕ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ವಿಷಯದಲ್ಲಿ ಬಿಇ ಓದಿದ್ದರು.

''ಜಾಬ್ ಮಾಡುತ್ತಲೇ ರಾಹುಲ್ ಐಎಎಸ್ ಪರೀಕ್ಷೆ ಬರೆದಿದ್ದರು. ಸಂದರ್ಶನಕ್ಕೆ ಆಯ್ಕೆಯಾಗಿದ್ದರೂ ಅದೃಷ್ಟ ಕೂಡಿ ಬರಲಿಲ್ಲ, ಸತತ ಮೂರನೇ ಪ್ರಯತ್ನದಲ್ಲಿ ದೇಶಕ್ಕೆ 17ನೇ ಹಾಗೂ ರಾಜ್ಯಕ್ಕೆ ಮೊದಲ ಸ್ಥಾನ ಪಡೆದಿದ್ದು ಖುಷಿ ತಂದಿದೆ,'' ಎನ್ನುತ್ತಾರೆ ಅವರ ಚಿಕ್ಕಪ್ಪ ಎ.ವಿ. ಸಂಕನೂರ.

ರಾಹುಲ್ ಅವರ ತಂದೆ ಶರಣಪ್ಪ ನೀರಾವರಿ ಇಲಾಖೆಯಲ್ಲಿ ಕಾರ್ಯನಿರ್ವಾಹಕ ಎಂಜಿನಿಯರ್ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ.

## ಗಿರೀಶ್ ಬಾಲ್ಯದಲ್ಲಿ ಕನ್ನಡ ಮಾಧ್ಯಮ ವಿದ್ಯಾರ್ಥಿ

**ವಿಜಯಪುರ:** ಯುಪಿಎಸ್‌ಸಿ ಪರೀಕ್ಷೆಯಲ್ಲಿ ನಾಗಠಾಣದ ಪ್ರತಿಭೆ





